## ಉಪತಹಶೀಲ್ದಾರರ ನ್ಯಾಯಾಲಯ, ನಾಡಕಾರ್ಯಾಲಯ, ಕಂಪ್ಲಿ

**ವಾದಿಗಳು**

1.ಶ್ರೀಮತಿ ಕುರುಬರ ಹನುಮಂತಮ್ಮ ಗಂಡ ಲೇಟ್ ಕೆ. ಮರಿಬಸಪ್ಪ,
2.ಶ್ರೀ ಎ.ಜಿ.ಗೋಪಾಲ ತಂದೆ ಜಿ. ವೀರಣ್ಣ

**ಪ್ರತಿವಾದಿಗಳು**

ಶ್ರೀಮತಿ ಗೀತಾ ಗಂಡ ಲೇಟ್ ಕೆ.ಉಮಾಪತಿ.

ಉಪಸ್ಥಿತರು :- ಉಪತಹಶೀಲ್ದಾರರು,
ನಾಡಕಾರ್ಯಾಲಯ, ಕಂಪ್ಲಿ.

| ತಾಲೂಕು | ಹೋಬಳ | ಗ್ರಾಮ | ಸ.ನಂ | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಕಂಪ್ಲಿ | ಮೆಟ್ರಿ | 138/2ಚ | 01.00 |

**ಪೀಠಿಕೆ:-**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಹೊಸಪೇಟೆ ತಾಲೂಕು ಕಂಪ್ಲಿ ಹೋಬಳ ಮೆಟ್ರಿ ಗ್ರಾಮದ ಸ.ನಂ. 138/2ಚ ವಿಸ್ತೀರ್ಣ 1.00 ಹಕ್ಕುಬದಲಾವಣೆ ಸಂಖ್ಯೆ:44/15-16 ವಹಿವಾಟು ಸಂಖ್ಯೆ: 209/2015-16 ರ ಕುರಿತಂತೆ ದಿನಾಂಕ:17.03.2016 ರಂದು ತಾಲೂಕು ಕಾರ್ಯಾಲಯದಲ್ಲಿ ನಿಗದಿತ ಅವಧಿಯೊಳಗೆ ಶ್ರೀಮತಿ ಗೀತಾ ಗಂಡ ಲೇಟ್ ಕೆ.ಉಮಾಪತಿ ಇವರು ತಕರಾರು ಅರ್ಜಿ ಸಲ್ಲಿಸಿರುವುದರಿಂದ ಕಂದಾಯ ನಿರೀಕ್ಷಕರು ಕಂಪ್ಲಿ ಇವರು ಇದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ನಾಡಕಾರ್ಯಾಲಯಕ್ಕೆ ಕಡತ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ಕೈಗೆತ್ತಿಕೊಂಡು ವಿಚಾರಣೆಯನ್ನು ದಿನಾಂಕ:12.05.2016 ರಂದು ಪ್ರಾರಂಭಿಸಿ ದಿನಾಂಕ:11.08.2016 ರಂದು ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಾಗಿದ್ದು, ತಾವು ಗ್ರಾಮದ ಹಿರಿಯ ಸಮ್ಮುಖದಲ್ಲಿ ರಾಜಿಯಾಗಿದ್ದು, ಅದರಂತೆ, ಮೆಟ್ರಿ ಗ್ರಾಮದ ಸ.ನಂ.138/2ಚ ವಿಸ್ತೀರ್ಣ 1.00 ಎಕರೆ ಜಮೀನನ್ನು ಉಪನೋಂದಣಾಧಿಕಾರಿ ಕಛೇರಿ ಕಂಪ್ಲಿ ಇವರಲ್ಲಿ ನೋಂದಾಯಿಸಲಾದ ದಸ್ತಾವೇಜು ಸಂಖ್ಯೆ: 2555/15-16 ದಿನಾಂಕ: 27.02.2016 ರ ಕ್ರಯ ಪತ್ರದ ಪ್ರಕಾರ ವಾದಿ-2 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತನ್ನ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಹಾಗೂ ತಕರಾರು ಹಿಂಪಡೆಯುತ್ತಿರುವುದಾಗಿ ದಿನಾಂಕ: 22/09/2016 ರ ಅಫಿಡವಿಟ್ ಹಾಗೂ ಹೇಳಿಕೆ ಮೂಲಕ ಪ್ರತಿವಾದಿಯಾದ ಶ್ರೀಮತಿ ಗೀತಾ ಗಂಡ ಲೇಟ್ ಕೆ. ಉಮಾಪತಿ ಇವರು ಒಪ್ಪಿ ದಾಖಲೆ ಸಲ್ಲಿಸಿರುತ್ತಾರೆ.

ಕಾರಣ, ಈ ಬಗ್ಗೆ ಲಭ್ಯವಿರುವ ದಾಖಲೆ ಪರಿಶೀಲಿಸಲಾಗಿ, ನೋಂದಾಯಿತ ದಸ್ತಾವೇಜು ಸಂಖ್ಯೆ:2555/2015-16 ದಿನಾಂಕ:27.02.2016 ರ ಮೂಲಕ ವಾದಿ-1 ರವರು ತನ್ನ ಹಕ್ಕಿನಲ್ಲಿರುವ ಮೆಟ್ರಿ ಗ್ರಾಮದ ಸ.ನಂ: 138/2ಚ ವಿಸ್ತೀರ್ಣ 01.00 ಎಕರೆ ಜಮೀನನ್ನು ವಾದಿ-2 ರವರಿಗೆ ಕ್ರಯಕ್ಕೆ ನೀಡಿದ್ದು, ಹಕ್ಕುಬದಲಾವಣೆ ಸಂದರ್ಭದಲ್ಲಿ ಪ್ರತಿವಾದಿ ಆಕ್ಷೇಪಣೆ ಸಲ್ಲಿಸಿದ್ದು, ಇದೀಗ ತಾವು ಗ್ರಾಮದ ಹಿರಿಯರ ಸಮ್ಮುಖದಲ್ಲಿ ರಾಜಿಯಾಗಿರುವುದಾಗಿ ದಿನಾಂಕ: 22/09/2016 ರ ಅಫಿಡವಿಟ್ ಹಾಗೂ ಲಿಖಿತ ಹೇಳಿಕೆ ಮೂಲಕ ತನ್ನ ತಕರಾರನ್ನು ಹಿಂಪಡೆದಿರುವುದಾಗಿ ತಿಳಿಸುತ್ತಾ, ಪ್ರಶ್ನಿತ ಹಕ್ಕುಬದಲಾವಣೆ ಅನ್ವಯ ವಾದಿಯ ಹೆಸರಿಗೆ ಹಕ್ಕುಬದಲಾವಣೆ ಮಾಡಲು ತನ್ನ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುವುದರಿಂದ, ಸದರಿ ಪ್ರಕರಣದಲ್ಲಿ ಪ್ರತಿವಾದಿಯ ಆಕ್ಷೇಪಣೆಯನ್ನು ತಳ್ಳಿಹಾಕುತ್ತಾ, ನೋಂದಾಯಿತ ಕ್ರಯ ಪತ್ರದನ್ವಯ ವಾದಿ-2 ರವರ ಹೆಸರಿಗೆ ಪ್ರಶ್ನಿತ ಹಕ್ಕುಬದಲಾವಣೆ ಅನ್ವಯ ವ್ಯಾಜ್ಯದ ಜಮೀನನ್ನು ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ

## -: ಆದೇಶ :-

ಸಂ/ಕಂ/ನಾಡಕಾ/ವಿವಾದಾಸ್ಪದ/07/2015-16

ದಿನಾಂಕ:22-09-2016.

ಪೀಠಿಕೆಯಲ್ಲಿ ವಿವರಿಸಿದ ಕಾರಣ ಹಾಗೂ ಅಂಶಗಳ ಹಿನ್ನೆಲೆಯಲ್ಲಿ, ಪ್ರತಿವಾದಿಯು ತನ್ನ ತಕರಾರನ್ನು ಹಿಂಪಡೆದು ಉಭಯಪಕ್ಷಗಾರರು ರಾಜಿಯಾಗಿರುವುದಾಗಿ ದಿನಾಂಕ: 22/09/2016 ರ ಅಫಿಡವಿಟ್ ಹಾಗೂ ಹೇಳಿಕೆ ಮೂಲಕ ಒಪ್ಪಿಕೊಂಡಿರುವುದರಿಂದ, ಪ್ರತಿವಾದಿಯ ತಕರಾರನ್ನು ವಜಾಗೊಳಿಸುತ್ತಾ, ಹೊಸಪೇಟೆ ತಾಲೂಕು, ಕಂಪ್ಲಿ ಹೋಬಳಿ, ಮೆಟ್ರಿ ಗ್ರಾಮದ ಸ.ನಂ.133/2ಬಿ ವಿಸ್ತೀರ್ಣ 1.00 ಎಕರೆ ಜಮೀನನ್ನು ನೋಂದಾಯಿತ ದಸ್ತಾವೇಜು ಸಂಖ್ಯೆ : 2563/15-16 ದಿನಾಂಕ:27.02.2016 ರನ್ವಯ ಕ್ರಯಕ್ಕೆ ಪಡೆದ ವಾದಿ-2 ರವರಾದ ಶ್ರೀ. ಎ.ಜಿ. ಗೋಪಾಲ ತಂದೆ ಜಿ.ವೀರಣ್ಣ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಸದರಿ ಆದೇಶವನ್ನು ದಿನಾಂಕ: 22.09.2016 ರಂದು ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನ ನೀಡಿ, ತಪ್ಪುಗಳನ್ನು ಸರಿಪಡಿಸಿ, ಘೋಷಿಸಲಾಯಿತು.

ಉಪತಹಶೀಲ್ದಾರರು,
ನಾಡಕಾರ್ಯಾಲಯ, ಕಂಪ್ಲಿ.

ಪ್ರತಿಯನ್ನು:-

1.ತಾಲೂಕು ಕಛೇರಿ ಹೊಸಪೇಟೆ ಭೂಮಿ ಕೇಂದ್ರ.
2.ಕಂದಾಯ ನಿರೀಕ್ಷಕರು ಕಂಪ್ಲಿ ಇವರಿಗೆ ಸೂಕ್ತ ಕ್ರಮಕ್ಕಾಗಿ.
3.ಗ್ರಾಮಲೆಕ್ಕಾಧಿಕಾರಿ ಮೆಟ್ರಿ ಇವರಿಗೆ ಮಾಹಿತಿಗಾಗಿ.
4.ವಾದಿ ಮತ್ತು ಪ್ರತಿವಾದಿಗಳಿಗೆ ಮಾಹಿತಿಗಾಗಿ.
5.ಕಛೇರಿ ಕಡತಕ್ಕೆ.